ಹನಿ

# ರೇಖಾ ಚಕ್ಕರ್!



ರಾಜ್ಯಸಭೆ ಎನ್ನುವುದು ಸಂಸತ್ತಿನಲ್ಲಿ ಹಿರಿಯರ ಮನೆ. ಚುನಾವಣೆಯಲ್ಲಿ ಆಯ್ಕೆ ಆದವರು ಮಾತ್ರ ಅಲ್ಲಿ ಸದಸ್ಯರಾಗುವುದಲ್ಲ; ವಿವಿಧ ಕ್ಷೇತ್ರಗಳಲ್ಲಿ ಸಾಧನೆ ನಡೆಸಿದ ಕೆಲವು ಗಣ್ಯರನ್ನು ಸರಕಾರವೇ ನಾಮಕರಣ ಮಾಡಿ ನೇಮಿಸುತ್ತದೆ. ಹೀಗೆ ನಾಮಕರಣ ಮಾಡುವಾಗ ಸರಕಾರದ ಲೆಕ್ಕಾಚಾರ ತಪ್ಪಾದರೆ ಏನಾಗುತ್ತದೆ ಎನ್ನುವುದಕ್ಕೆ ಸದ್ಯಕ್ಕೆ ಸದಸ್ಯರಾಗಿರುವ ಇಬ್ಬರು ಸಾಕ್ಷಿ! ಒಬ್ಬರು ಸಚಿನ್ ತೆಂಡೂಲ್ಕರ್; ಇನ್ನೊಬ್ಬರು ಚಿತ್ರನಟಿ ರೇಖಾ. ಇಬ್ಬರದ್ದೂ ರಾಜ್ಯಸಭೆಯ ಕಲಾಪದಲ್ಲಿ ಅತ್ಯಂತ ಕನಿಷ್ಠ ಹಾಜರಾತಿ. ರೇಖಾ ಅವರದ್ದಂತೂ ಅತ್ಯಂತ ಕನಿಷ್ಠ ಅಂದರೆ ಶೇಕಡಾ 10ರಷ್ಟು ಮಾತ್ರ! ಅನಾರೋಗ್ಯದಿಂದ ರಾಜ್ಯಸಭೆಗೆ ಬರಲಾಗದಿರುವ ಮಿಥುನ್ ಚಕ್ರವರ್ತಿಯದ್ದೇ ಶೇಕಡಾ 20ರಷ್ಟು ಹಾಜರಾತಿ ಇದೆ; ಹಾಗಿರುವಾಗ ಆರೋಗ್ಯದಿಂದ ಚಿಮ್ಮುತ್ತಾ, ಓಡಾಡುತ್ತಿರುವ ರೇಖಾ ಅವರದ್ದು ಕೇವಲ ಶೇಕಡಾ 10ರಷ್ಟು ಹಾಜರಾತಿ ಎಂದರೆ ಏನು ಹೇಳುವುದು?

ಕಳೆದ ವಾರ ರಾಜ್ಯಸಭೆಯಲ್ಲಿ ಎಲ್ಲರ ಬಾಯಲ್ಲೂ ರೇಖಾ ಜಪ! ಜಿಎಸ್‌ಟಿ (ಸರಕು ಮತ್ತು ಸೇವೆ ತೆರಿಗೆ) ಮಸೂದೆಗೆ ಎಲ್ಲ ಸದಸ್ಯರ ಬೆಂಬಲವನ್ನೂ ಕ್ರೋಢೀಕರಿಸಲು ಸಂಬಂಧಿಸಿದ ಸಚಿವರು ಓಡಾಡುತ್ತಿದ್ದರು. ಆಳುವ ಪಕ್ಷದ ಎಲ್ಲ ಸದಸ್ಯರಿಗೆ ವಿಪ್ ನೀಡಲಾಗಿತ್ತು. ವಿರೋಧ ಪಕ್ಷದ ಎಲ್ಲ ಸದಸ್ಯರನ್ನೂ ಸಚಿವರೇ ಖುದ್ದಾಗಿ ಮಾತನಾಡಿ ಬೆಂಬಲ ಕೋರಿದ್ದರು. ಆದರೆ ರೇಖಾ ನಾಪತ್ತೆ! ಫೋನ್ ಮಾಡಿದರೂ ಲಭ್ಯವಿಲ್ಲ. ಕೊನೆಗೂ ಜಿಎಸ್‌ಟಿ ಮಸೂದೆ ಚರ್ಚೆಯ ವೇಳೆಗೆ ರೇಖಾ ಬರಲೇ ಇಲ್ಲ. ಐದಾರು ದಿನ ಬಿಟ್ಟು ಬಂದಾಗ ಜಿಎಸ್‌ಟಿ ಚರ್ಚೆ ಮುಗಿದು ನ್ಯಾಯಾಧೀಶರ ನೇಮಕದ ಚರ್ಚೆ ಶುರುವಾಗಿತ್ತು. ಅಂದ ಹಾಗೆ ಬಜೆಟ್ ಅಧಿವೇಶನದಲ್ಲಿ ಒಂದು ದಿನ ಮಧ್ಯಾಹ್ನ ಊಟದ ಬಳಿಕ ಬಂದು ಒಂದರ್ಧ ಗಂಟೆ ಕುಳಿತದ್ದೇ ರೇಖಾ ಸಾಧನೆ. ಹಾಜರಾತಿ ಬಿಡಿ, ರಾಜ್ಯಸಭೆಗೆ ನಾಮಕರಣವಾದ ಬಳಿಕದ ಈ ಐದು ವರ್ಷಗಳಲ್ಲಿ ರಾಜ್ಯಸಭೆಯಲ್ಲಿ ರೇಖಾ ಅವರು ಕೇಳಿದ ಪ್ರಶ್ನೆಗಳ ಸಂಖ್ಯೆಯೂ ಸೊನ್ನೆಯೇ! 'ಪ್ರಶ್ನೆಗಳೇ ಇಲ್ಲ, ಎಲ್ಲ ಪ್ರಶ್ನೆಗಳಿಗೂ ಅವರಿಗೆ ಉತ್ತರ ಗೊತ್ತಿದೆ ಬಿಡ್ರೀ..' ಎನ್ನಬಹುದೆ?

ಭಾನುರೇಖಾ ಗಣೇಶನ್ ಹುಟ್ಟಿದ್ದು (ಬರ್ತ್‌ಡೇ 10–10–1954) ಚೆನ್ನೈಯಲ್ಲಾದರೂ, ಚೆನ್ನಾಗಿದ್ದಾಳೆಂದು ಅಪ್ಪಿ ಮುದ್ದಾಡಿದ್ದು ಬಾಲಿವುಡ್. 63ರ ಹರೆಯದ 'ಚಿರಯುವತಿ' ರೇಖಾ 1966ರಲ್ಲಿ ಬಾಲನಟಿಯಾಗಿ ಚಿತ್ರರಂಗ ಪ್ರವೇಶಿಸಿದ್ದು. ಕನ್ನಡದಲ್ಲಿ 'ಆಪರೇಶನ್ ಜಾಕ್‌ಪಾಟ್ ಸಿಐಡಿ 999' ಚಿತ್ರದಲ್ಲಿ ಶೋಡಸಿಯಾಗಿ ಎಂಟ್ರಿ ಕೊಡುವುದಕ್ಕೆ ಮುನ್ನ ಹಿಂದಿಯಲ್ಲಿ 'ಅಂಜಾನಾ ಸಫರ್' ಎಂಬ ಸಿನಿಮಾದಲ್ಲಿ ಹೀರೋಯಿನ್ ಆಗಿ ಶೂಟಿಂಗ್ ಸ್ಪಾಟ್‌ನಲ್ಲಿ ಹೀರೋನ 'ಬಲವಂತದ ಚುಂಬನ'ಕ್ಕೆ ಕಣ್ಣುಮುಚ್ಚಿ ಸಾಕ್ಷಿಯಾದಾಕೆ ರೇಖಾ. 'ರೇಖಾ: ಅನ್‌ಟೋಲ್ಡ್ ಸ್ಟೋರಿ' ಎಂಬ ಪುಸ್ತಕ ಓದಿದರೆ ಇಂತಹ ನೂರೆಂಟು ರೋಚಕ ಘಟನೆಗಳ ವಿವರಗಳಿವೆ. ರೇಖಾ ಸುಂದರಿಯೂ ಹೌದು; ಅತ್ಯುತ್ತಮ ನಟಿಯೂ ಹೌದು. ಸಮಕಾಲೀನ ನಟಿಯರ ಜತೆಗೆ ಹೋಲಿಸಿದಾಗ ರೇಖಾ ಅಭಿನಯಪ್ರತಿಭೆ ಒಂದು ತೂಕ ಹೆಚ್ಚೇ ಇದೆ. ಆದರೆ ವೈಯಕ್ತಿಕ ಜೀವನದ ರೋಚಕ ಸಂಗತಿಗಳಿಗೆ ಬೇರೆಲ್ಲರಿಗಿಂತ ಹೆಚ್ಚು ಸುದ್ದಿಯಾದವರೂ ಹೌದು. ವಿನೋದ್ ಮೆಹ್ರಾ ಜತೆಗಿನ ಮದುವೆ, ಅಮಿತಾಭ್ ಜತೆಗಿನ ಸ್ನೇಹ, ಅಗರ್‌ವಾಲ್ ಎಂಬ ಉದ್ಯಮಿಯ ಜತೆಗಿನ ಮದುವೆ, ಬಳಿಕ ಆತ ನೇಣು ಹಾಕಿಕೊಂಡದ್ದು– ಎಲ್ಲವೂ ರೇಖಾ ಜೀವನದ ಗಮನ ಸೆಳೆದ ಸಂಗತಿಗಳೇ. ಬಾಲಿವುಡ್ ಕ್ವೀನ್, ಮೇಡಂ ಎಕ್ಸ್– ಮುಂತಾಗಿ ವಿಶೇಷ ಬಿರುದುಗಳಿಂದ ಕರೆಯಲ್ಪಟ್ಟ ರೇಖಾಜಿ, ಈಗಲೂ ಬಾಲಿವುಡ್ ಪಾರ್ಟಿಗಳಿಗೆ ಬಂದರೆ ಎಲ್ಲರ ಕಣ್ಣರಳುತ್ತದೆ. ಅಭಿಮಾನಿಗಳಿಗೆ ರೋಚಕವೆನ್ನಿಸುವ ಇಂತಹ ಸಂಗತಿಗಳ ಮಧ್ಯೆ ನಿಜಕ್ಕೂ ರೇಖಾಳ ಪ್ರತಿಭೆಗೆ ಕನ್ನಡಿ ಹಿಡಿಯುವ ಸಂಗತಿಗಳಾದ ಕವಿತೆ ಬರೆಯುವುದು, ಚಾರ್‌ಕೋಲ್‌ನಿಂದ ಚಿತ್ರ ಬಿಡಿಸುವುದು, ಯೋಗ ಕಲಿತಿರುವುದು– ಎಲ್ಲವೂ ಕಣ್ಮರೆಯಾಗಿ ಹೋಗಿವೆ.

ಖ್ಯಾತನಾಮರನ್ನು ರಾಜ್ಯಸಭೆಗೆ ನಾಮಕರಣ ಮಾಡಿ ಜನರಿಗೆ ಅಥವಾ ರಾಜಕಾರಣಕ್ಕೆ ಏನಾದರೂ ಪ್ರಯೋಜನ ಆಗುವುದೆ... ಎಂಬ ಪ್ರಶ್ನೆ ಈಗ ಮತ್ತೆ ರೇಖಾ ಅವರಿಂದಾಗಿಯೇ ಮೇಲೆದ್ದಿದೆ. ರಾಜ್ಯಸಭೆಗೆ ಪ್ರಥ್ವಿರಾಜ್ ಕಪೂರ್ ಅವರಿಂದ ಹಿಡಿದು ರೂಪಾ ಗಂಗೂಲಿವರೆಗೆ ಸಾಕಷ್ಟು ಸಿನಿಮಾ ತಾರೆಯರು ನಾಮಕರಣ ಹೊಂದಿದ್ದರೂ, ಇಷ್ಟು ಕಡಿಮೆ ಹಾಜರಾತಿ ತೋರಿಸಿದವರು ಯಾರೂ ಇಲ್ಲ ಎನ್ನಬಹುದು. ಬೇರೆ ಕ್ಷೇತ್ರಗಳ ಬಗ್ಗೆ ಅಲ್ಲವಾದರೂ ತಮ್ಮದೇ ಆದ ಸಿನಿಮಾ ಕ್ಷೇತ್ರದ ಬಗ್ಗೆಯಾದರೂ ಸಾಕಷ್ಟು ಪ್ರಶ್ನೆಗಳನ್ನು ಕೇಳುವ, ಚರ್ಚೆಯಲ್ಲಿ ಭಾಗವಹಿಸಿ ಅನುಭವವನ್ನು ಹಂಚಿಕೊಳ್ಳುವ ಅಪೂರ್ವ ಅವಕಾಶ ಇಲ್ಲಿ ತಾರೆಯರಿಗೆ ಇದೆ. ಆದರೆ ಯಾರೂ ಈ ನಾಮಕರಣವನ್ನು ಗಂಭೀರವಾಗಿ ತೆಗೆದುಕೊಂಡ ಹಾಗೆ ಕಾಣುವುದಿಲ್ಲ. ರೇಖಾ ಜತೆಗೇ ನಾಮಕರಣಗೊಂಡ ಸಚಿನ್ ತೆಂಡೂಲ್ಕರ್, ಕೊನೇಪಕ್ಷ ಕ್ರಿಕೆಟ್ ರಂಗದಲ್ಲಾದರೂ ಬ್ಯುಸಿಯಾಗಿದ್ದಾರೆ. ಆದರೆ ರೇಖಾ ಕೈಯಲ್ಲಿ ಸದ್ಯಕ್ಕೆ ಯಾವ ಸಿನಿಮಾ ಕೂಡಾ ಇಲ್ಲ. 2014ರಲ್ಲಿ ತೆರೆಗೆ ಬಂದ 'ಸೂಪರ್ ನಾನಿ' ಎಂಬ ಸಿನಿಮಾ ಬಳಿಕ ಇನ್ನಾವ ಸಿನಿಮಾದಲ್ಲೂ ರೇಖಾ ನಟಿಸಿದ ಸುದ್ದಿಯೇ ಇಲ್ಲ. ಇಷ್ಟೊಂದು ಪುರುಸೊತ್ತಿರುವಾಗ ರಾಜ್ಯಸಭೆಗೆ ಬಂದು ಕುಳಿತು ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಏನಡ್ಡಿ?

Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65